ಸಂಭ್ರಮ—ಓಡಾಟ—ಹಾರಾಟಗಳನ್ನೆಲ್ಲ ಹೇಳತೀರದು. ಹಲವು ತಿಂಗಳುಗಳಿಂದ ಸ್ತಬ್ಧಗೊಂಡಂತಿದ್ದ ಆತನ ಉಲ್ಲಾಸ, ಓಡಾಟ, ಕೇಕೆ ನಗುವೆಲ್ಲಾ ಮತ್ತೆ ಆರಂಭಗೊಂಡಿರುವುದನ್ನು ಕಂಡು ಆತನ ತಾಯಿ ಕುಮುದಳು ತೀರಾ ಸಂತೋಷಿತಳಾಗಿದ್ದಾಳೆ.

ಇವತ್ತು ಬೆಳಿಗ್ಗೆ ಅಪ್ಪ ಆಫೀಸಿಗೆ ಹೊರಡುವ ವೇಳೆಗೆ, ಅಪ್ಪನ ಮೋಟಾರು ಬೈಕು ಅಂಗಳದಿಂದ ಕದಲುವವರೆಗೆ ಬೆಚ್ಚಗೆ ಹೊದ್ದು ಮಲಗಿಕೊಂಡಿದ್ದ ಕೌಶಿಕ, ಅಪ್ಪನ ಬೈಕಿನ ಸದ್ದು ಕಿವಿ ತಮಟೆಯಿಂದ ದೂರವಾದೊಡನೆ, ಮಲಗಿದ್ದಲ್ಲಿಂದ ದಿಡಕ್ಕನೆ ಎದ್ದು ಕೂತು—ಅಡುಗೆಮನೆಯಲ್ಲಿ ತೆಂಗಿನಕಾಯಿ ತುರಿಯುತ್ತಿದ್ದ, ಅಮ್ಮನ ಬೆನ್ನಿಗೆ ಜೋತು ಬಿದ್ದು ಕೇಳಿದ್ದ: "ಅಮ್ಮ ನಂಗೆ ರಜಾ ಬಂತಲ್ಲಮ್ಮಾ... ನಾವು ಕಾಡುಗಮಿಯ ಅಜ್ಜನ ಊರಿಗೆ ಹೋಗೋದು ಯಾವಾಗಮ್ಮ? ಇವತ್ತು ರಾತ್ರಿಯೂ ನನಗೆ ಹೋಂವರ್ಕ್ ಇದೆಯಂತ ಅಪ್ಪ ನಿನ್ನೆ ರಾತ್ರಿ ನಿಂಗೆ ಹೇಳ್ತಿದ್ರಲ್ವ?..."

ಮಗನ ಮಾತು ಕೇಳಿ, ಕುಮುದಳು ಮನಸ್ಸು ಮುದುಡಿಸಿಕೊಂಡಳಲ್ಲದೆ ಆಕೆ ಒಂಥರಾ ಅಚ್ಚರಿ ಹಾಗೂ ಮುಜುಗರಕ್ಕೆ ಒಳಗಾಗಿದ್ದಳು. ಮಗು ಮಲಗಿದೆ ಅಂತಾ... ರಾತ್ರಿ ಹೀಗೆ ತಾವಿಬ್ಬರು ಏನೇನು ಮಾತಾಡಿಕೊಂಡರೂ ಇದೇ ಕತೆಯಲ್ವೆ !? ಮಗು ನಿನ್ನೆ ನಿದ್ದೆ ಮಾಡಿರುವಂತೆ ಕಣ್ಮುಚ್ಚಿಕೊಂಡು ಎಲ್ಲವನ್ನೂ ಕೇಳಿಸಿಕೊಂಡಿದೆಯಲ್ವ — ಎನ್ನುವುದೇ ಆಕೆಯ ಅಚ್ಚರಿ ಮತ್ತು ಮುಜುಗರಕ್ಕೆ ಕಾರಣ. ಆದರೆ ಇದೀಗ ಮಗನ ಪ್ರಶ್ನೆಯನ್ನು ಕೇಳಿ ಆಕೆ ಮನಸ್ಸನ್ನು ನಿಜಕ್ಕೂ ಮುದುಡಿಸಿಕೊಂಡು ನಿಧಾನಕ್ಕೆ ಆಕೆ ಹನಿಗಣ್ಣಾಗಿದ್ದಳು. ಗಂಡನ ನಿನ್ನೆಯ ಮಾತನ್ನು ಆಕೆ ನೆನಪಿಸಿಕೊಂಡಳು :

ನಿನ್ನೆ ರಾತ್ರಿ ಎಂಟು ಗಂಟೆ ಕಳೆದಿರಬೇಕು. ಬಳಲಿ ಬೆಂಡಾಗಿ ಆಫೀಸಿನಿಂದ ಬಂದವನೆ ಕೌಶಿಕನ ಅಪ್ಪ ಅಕ್ಷಯಕುಮಾರ, ಮಗನಾಗಲೇ ನಿದ್ದೆ ಹೋಗಿದ್ದನ್ನು ಕಂಡು, ಸಿಡಿಮಿಡಿಗೊಂಡು ಹೆಂಡತಿಗೆ ಅಂದಿದ್ದ: "ಏನೇ ಇವನು... ಪರೀಕ್ಷೆ ಮುಗೀತು ಅಂತ ಇಷ್ಟು ಬೇಗ ನಿದ್ದೆ ಮಾಡ್ತಿದ್ದಾನೆ !? ಮುಂದಿನ ತಿಂಗಳು ಐಸಿಎಸ್ಸಿ ಸಿಲಬಸ್ ಇರುವ 'ನ್ಯೂ ಜನರೇಷನ್ ಸ್ಕೂಲ್'ನಲ್ಲಿ ಇವನಿಗೆ ಅಡ್ಮಿಷನ್ ಟೆಸ್ಟ್ ಇದೆ. ಯಾರ್‍ಯಾರ್ದೋ ಕೈಕಾಲು ಹಿಡಿದು ಒಂದು ಸೀಟು ಮಾತಾಡಿದ್ದೇನೆ. ಇವನು ರಿಟನ್ ಟೆಸ್ಟ್ ಪಾಸಾದ್ರೆ ಮಾತ್ರ ಇವ್ನಿಗೆ ಸೀಟಂತೆ. ಹೋಗ್ಲಿ ಅತ್ಲಾಗೆ... ಇಂವ ಒಮ್ಮೆ ಟೆಸ್ಟ್ ಪಾಸಾದ್ರೆ ಸಾಕು: ಸೈಟಿಗಂತ ಒಂದಷ್ಟು ಕೂಡಿಟ್ಟ ಹಣದಿಂದಲೇ, ಡೊನೇಷನ್ ಕೊಟ್ಟು, ಆ ಐಸಿಎಸ್ಸಿ ಸ್ಕೂಲಲ್ಲೇ ಓದಿಸೋದು ಇವನನ್ನು..."

ಗಂಡನ ಆ ಮಾತು ಕೇಳಿ, ಕುಮುದಳ ಎದೆಯೊಡೆದಂತಾಗಿತ್ತು. ಭಯನೋ... ಬೇಸರಿಕೆನೋ ಏನೋ ಒಂದು ಭಾವ ಆಕೆಯ ಎದೆಯೊಳಗೆ ನುಗ್ಗಿ ಬಂದಂತಾಗಿ ಆಕೆ ತಟ್ಟನೆ ಅಂದಿದ್ದಳು : "ಇವತ್ತು ಅಲ್ಲ ಮಾರಾಯ್ರೆ... ಅವನ ಪರೀಕ್ಷೆ ಮುಗಿದಿದ್ದು, ಎಷ್ಟು ಅಂತ ಆ ಮಗುವಿನ ಮೇಲೆ ನಾವು ಒತ್ತಡ ಹಾಕುದು... ಹೇಳಿ?... ನಿದ್ದೆಯಲ್ಲೆದ್ರೂ ಆ ಮಗು... 'ತ್ರೀ ಫೋರ್ ಝೀರ್ ನೈನ್' ಅಂತ ಹೇಳಿ ಮತ್ತೆ ಮಲಗ್ತದೆ."

"ನೋಡು... ನೋಡು... ನೋಡು... ಎಷ್ಟು ಬಾರಿಸಿದರೂ, ಇಂವ ರಿಪೇರಿ ಆಗ್ತಿಲ್ವಲ್ಲ ?! ಮೂರು ನಾಕ್ಲೆ ಹನ್ನೆರಡು ಹೇಳ್ಲಿಕ್ಕೆ ಏನೇ ದಾಡಿ ಇಂವನಿಗೆ... ಇಂವ ನಿದ್ದೆಯಲ್ಲೂ 'ನೈನ್' ಎಂತನೇ ತಪ್ಪು ಹೇಳ್ತಿದ್ದಾನಂದ್ರೆ ನಿಂಗೇನನಿಸುತ್ತೆ... ಹೇಳು !? ಇಂವ ನಾಳೆ ಹೀಗೆನೆ ಹೇಳಿದ್ರೆ... ಆ ಹೊಸ ಐಸಿಎಸ್ಸಿ ಶಾಲೆಯಲ್ಲಿ ಇವ್ನಿಗೆ ಸೀಟು ಸಿಗುವುದು... ಹೌದಾ?"

"ಅಲ್ಲ ಮಾರಾಯ್ರೆ... ಆ ಶಾಲೆಯಲ್ಲೇ ಇವನು ಯಾಕೆ ಕಲಿಬೇಕು ? ಈಗಿನ ಈ ಶಾಲೆಯಲ್ಲೆ